ಅ) ದಕ್ಷಿಣ ಕನ್ನಡ ಜಿಲ್ಲೆಯ ಕಿರಿಯ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಶೌಚಾಲಯ ಮತ್ತು ಆಟದ ಮೈದಾನ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಅದು ಎಲ್ಲೆಲ್ಲಿ (ತಾಲ್ಲೂಕುವಾರು ವಿವರ ನೀಡವುದು)

ಇ) ಈ ರೀತಿ ಬಂದಿದ್ದರೆ ಈ ಕೊರತೆಯನ್ನು ನೀಗಿಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ

(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಬಂದಿದೆ.

ಆಟದ ಮೈದಾನ : ಶೌಚಾಲಯ ಇಲ್ಲದಿರುವ ಶಾಲೆಗಳ ಸಂಖ್ಯೆಯ ಪಟ್ಟಿ (ತಾಲ್ಲೂಕುವಾರು)

ತಾಲ್ಲೂಕಿನ ಹೆಸರು	ಆಟದ ಮೈದಾನ		ಶೌಚಾಲಯ	
	ಪ್ರಾಥಮಿಕ	ಪ್ರೌಢಶಾಲೆ	ಪ್ರಾಥಮಿಕ	ಪ್ರೌಢಶಾಲೆ
1) ಬಂಟವಾಳ	80	02	86	07
2) ಬೆಳ್ತಂಗಡಿ	43	04	65	10
3) ಕಾರ್ಕಳ	90	03	146	10
4) ಕುಂದಾಪುರ	41	05	206	15
5) ಮಂಗಳೂರು	41	10	15	10
6) ಪುತ್ತೂರು	106	01	152	04
7) ಸುಳ್ಯ	17	04	55	06
8) ಉಡುಪಿ	60	06	71	14
	478	35	796	76

'ಅಕ್ಷಯ' ಯೋಜನೆ ಅಡಿಯಲ್ಲಿ ಆಟದ ಮೈದಾನ ಒದಗಿಸುವುದು ಒಂದು ಕಾರ್ಯಕ್ರಮವಾಗಿದ್ದು ಹಂತಹಂತವಾಗಿ 8ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಪೂರ್ಕೆಕೆ ಮಾಡಲಾಗುವುದು. ನೀರು ಪೂರ್ಕೆಕೆ : ಶೌಚಾಲಯಗಳಿಗೆ ಒಂದು ಪ್ರತ್ಯೇಕ ಕಾರ್ಯಕ್ರಮ ಹಾಕಿಕೊಂಡು ಪೂರ್ಕೆಕೆ ಮಾಡುವ ಯೋಜನೆ ಸರ್ಕಾರದ ಮುಂದಿದ್ದು 94-95ರಲ್ಲಿ ಪ್ರಾರಂಭ ಮಾಡಿ ಹಂತಹಂತವಾಗಿ ಪೂರ್ಕೆಕೆ ಮಾಡಲಾಗುವುದು.

ವಿಷಯ : – ಹಾಸನ ಪಟ್ಟಣದ ವಿಭಜಿತ ಬಾಲಕಿಯರ ಶಾಲೆಗೆ ಹೆಚ್ಚುವರಿ ಕೊಠಡಿಗಳ ಅವಶ್ಯಕತೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 302(607)

ಶ್ರೀ ಕೆ.ಹೆಚ್. ಹನುಮೇಗೌಡ(ಹಾಸನ)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಪಟ್ಟಣದ ವಿಭಜಿತ ಬಾಲಕಿಯರ ಪ್ರೌಢಶಾಲೆಗೆ ಹೆಚ್ಚುವರಿ ಕೊಠಡಿಗಳ ಅವಶ್ಯಕತೆ ಇರುವುದು ; ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಪ್ರೌಢ ಶಾಲೆಗೆ ಅವಶ್ಯಕತೆ ಇರುವ ಕೊಠಡಿಗಳನ್ನು ಕಟ್ಟಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ

(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಹೌದು

ಈ ಪ್ರೌಢ ಶಾಲೆಯ ಕಟ್ಟಡದಲ್ಲಿ ಹಾಲಿ ಇರುವ ಕೊಠಡಿಗಳು ಮಳೆಯಿಂದ ತುಂಬಾ ಸೋರುತ್ತಿದ್ದು ತುರ್ತಾಗಿ ದುರಸ್ತಿ ಆಗಬೇಕಾಗಿರುವುದರಿಂದ ಜಿಲ್ಲಾಪರಿಷತ್ತಿನ ವತಿಯಿಂದ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಶಾಲಾ ಕೊಠಡಿಗಳು ದುರಸ್ತಿಯಾದ ನಂತರ ಶಾಲಾ ಕೊಠಡಿಗಳ ಕೊರತೆಯನ್ನು ನೀಗಲು ಶಾಲಾ ಕಟ್ಟಡದ ಮೊದಲ ಅಂತಸ್ತಿನಲ್ಲಿ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲು ಜಿಲ್ಲಾಪರಿಷತ್ತಿಗೆ ಸೂಚಿಸಲಾಗುವುದು.

ವಿಷಯ : - ಅರಣ್ಯ ಇಲಾಖೆಯಿಂದ ನೆಟ್ಟಿರುವ ಸಸಿಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 303(628)

ಶ್ರೀ ಪಿ.ಜಿ.ಆರ್ ಸಿಂಧ್ಯ(ಕನಕಪುರ)

ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1990-91, 1991-92 ಮತ್ತು 1992-93ನೇ ಸಾಲಿನಲ್ಲಿ ರಾಜ್ಯದಲ್ಲಿ ಅರಣ್ಯ ಇಲಾಖೆಯಿಂದ ನೆಟ್ಟಿರುವ ಸಸಿಗಳ ಸಂಖ್ಯೆ ಎಷ್ಟು?

ಆ) ಅವುಗಳಲ್ಲಿ ಉಳಿದಿರುವ ಸಸಿಗಳ ಸಂಖ್ಯೆ ಎಷ್ಟು?

ಇ) ಈ ಕಾರ್ಯಕ್ರಮಕ್ಕಾಗಿ ವಿಶ್ವಬ್ಯಾಂಕ್ ನೆರವನ್ನು ಪಡೆಯಲಾಗಿದೆಯೇ?

ಈ) ಹಾಗಿದ್ದಲ್ಲಿ ಆ ನೆರವಿನ ಮೊತ್ತ ಎಷ್ಟು?

ಶ್ರೀ ಎಂ. ಪಿ.ಕೇಶವಮೂರ್ತಿ

(ಅರಣ್ಯ ರಾಜ್ಯಸಚಿವರು)

ಅರಣ್ಯ ಇಲಾಖಾವತಿಯಿಂದ ನೆಟ್ಟ ಸಸಿಗಳ ಸಂಖ್ಯೆ ಈ ಕೆಳಕಂಡಂತಿರುವುದು : -

1990-91	-	711.365 ಲಕ್ಷ ಸಸಿಗಳು
1991-92	-	532.156 ಲಕ್ಷ ಸಸಿಗಳು
1992-93	-	541.468 ಲಕ್ಷ ಸಸಿಗಳು

1990-91 ಮತ್ತು 1991-92ನೇ ಸಾಲಿನಲ್ಲಿ ನೆಡಲಾದ ಸಸಿಗಳ ಪೈಕಿ ಬದುಕಿ ಉಳಿದಿರುವ ಸಸಿಗಳ ಶೇಕಡಾವಾರು ಅನುಕ್ರಮವಾಗಿ 68.57 ಮತ್ತು 71.13 ಆಗಿರುವುದು. 1992-93ನೇ ಸಾಲಿನಲ್ಲಿ ನೆಟ್ಟ ಸಸಿಗಳ ಬದುಕುಳಿದ ವಿವರಗಳನ್ನು ಸಂಗ್ರಹಿಸಲಾಗುತ್ತಿದೆ.

ಈ) ಹಾಗಿದ್ದಲ್ಲಿ ಆ ನೆರವಿನ ಮೊತ್ತ ಎಷ್ಟು?

ಹೌದು

1990-91	-	ರೂ. 1302.492 ಲಕ್ಷ
1991-92	-	ರೂ. 737.79 ಲಕ್ಷ

ವಿಷಯ : - ಅರಣ್ಯ ಪ್ರದೇಶವನ್ನು ವನ್ಯ ಧಾಮಗಳಿಗೆ ಸೇರಿಸಿರುವ ಬಗ್ಗೆ